ಇ) ಇಂಡಿಯನ್ ಇನ್ಸ್‌ಟ್ಯೂಟ್ ಆಫ್ ಸೈಯನ್ಸ್ ಪರಿಣಿತ ತಂಡವು ನೀಡಿದ ಸಲಹೆ ಸೂಚನೆಗಳನ್ವಯ ಕಾಮಗಾರಿಯ ಪುನರ್ ನಿರ್ಮಾಣದ ಅಂದಾಜು ಪಟ್ಟಿ ತಯಾರಿಕಾ ಹಂತದಲ್ಲಿದೆ. ಇಲ್ಲಿಯವರೆಗೆ ಈ ಕಾಮಗಾರಿಗೆ ರೂ. 248.27 ಲಕ್ಷ ವೆಚ್ಚವಾಗಿದೆ.

ಸಂಕೇಶ್ವರ ತಾಲ್ಲೂಕಿನಲ್ಲಿ ವಿದ್ಯುತ್ ಸ್ಟೇಷನ್‌ಗಳ ಮಂಜೂರಾತಿ

2539(3200) ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ್ (ಸಂಕೇಶ್ವರ್) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರ 110 ಕೆ.ವಿ. ಸ್ಟೇಷನ್, ನಿಡಸೋಸಿ 33 ಕೆ.ವಿ. ಸ್ಟೇಷನ್. ಕಣಗಲಾ 33 ಕೆ.ವಿ. ಸ್ಟೇಷನ್. ಹೆಬ್ಬಾಳ್ 33 ಕೆ.ವಿ. ಸ್ಟೇಷನ್ ಹಾಗೂ ದಡ್ಡಿ 110 ಕೆ.ವಿ. ಸ್ಟೇಷನ್‌ಗಳು ಮಂಜೂರಾಗಿದ್ದರೂ ಅವುಗಳನ್ನು ಇಲ್ಲಿಯವರೆಗೆ ಪ್ರಾರಂಭಿಸದಿರಲು ಕಾರಣಗಳೇನು;

ಆ) ಈ ದಿಸೆಯಲ್ಲಿ ಇಲ್ಲಿಯವರೆಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ಹಾಗೂ ಪ್ರಗತಿಯಾಗಿದ್ದಲ್ಲಿ ಅದರ ವಿವರಗಳನ್ನು ಒದಗಿಸುವುದು?

ಶ್ರೀ ಬಸವರಾಜ ಪಾಟೀಲ್(ಇಂಧನ ರಾಜ್ಯ ಸಚಿವರು) :

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರದಲ್ಲಿ ಹಾಲಿ ಇರುವ 33 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರವನ್ನು 110 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರವನ್ನಾಗಿ ಉನ್ನತೀಕರಣಗೊಳಿಸುವ ಕಾಮಗಾರಿಗೆ ಮಾರ್ಚ್ 2002ರಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದ್ದು. ಈ ಕಾಮಗಾರಿಯನ್ನು ಸಂಪೂರ್ಣ ಗುತ್ತಿಗೆ ಆಧಾರದ ಮೇಲೆ ನಿರ್ವಹಿಸಲು ಗುತ್ತಿಗೆದಾರರಿಗೆ ವಹಿಸಿಕೊಡಲಾಗಿದೆ. ಈ ಕಾಮಗಾರಿಗಳನ್ನು ಆದಷ್ಟು ಜಾಗ್ರತೆ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಹುಕ್ಕೇರಿ ತಾಲ್ಲೂಕಿನ ದಡ್ಡಿಯಲ್ಲಿ ಒಂದು 110 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆಯು ಸದ್ಯಕ್ಕೆ ನಿಗಮದ ಮುಂದೆ ಇರುವುದಿಲ್ಲ. ಆದರೆ ಏತ ನೀರಾವರಿ ಯೋಜನೆಗೆ ವಿದ್ಯುತ್ ಸರಬರಾಜು ಮಾಡುವ ಸಲುವಾಗಿ ದಡ್ಡಿ ಹತ್ತಿರ ಒಂದು 110 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರವನ್ನು ಸ್ಥಾಪಿಸುವ ಯೋಜನೆ ಇದೆ. ಮಾರ್ಗ ಸರ್ವೆ ಕಾರ್ಯಗಳು ಮುಗಿದಿದ್ದು, ಅಂದಾಜು ಪತ್ರಿಕೆಯನ್ನು ತಯಾರಿಸಲಾಗುತ್ತಿದೆ. ಸದರಿ ವಿದ್ಯುತ್ ವಿತರಣಾ ಕೇಂದ್ರದ ನಿರ್ಮಾಣ ಕಾರ್ಯವನ್ನು ನೀರಾವರಿ ಇಲಾಖೆಯು ಸ್ವಯಂ ನಿರ್ವಹಣೆ ಆಧಾರದಲ್ಲಿ ನಿರ್ವಹಿಸಬೇಕೇ ಅಥವಾ ಠೇವಣಿ ವಂತಿಕೆ (DCW) ಆಧಾರದ ಮೇಲೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ನಿರ್ವಹಿಸಬೇಕೇ ಎಂಬುವುದು ಇನ್ನೂ ಇತ್ಯರ್ಥಗೊಳ್ಳಬೇಕಾಗಿರುತ್ತದೆ.

ಹುಕ್ಕೇರಿ ತಾಲ್ಲೂಕಿನ ಕಣಗಲ ಗ್ರಾಮದಲ್ಲಿ ಒಂದು 33 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರವನ್ನು ಸ್ಥಾಪಿಸುವ ಕಾಮಗಾರಿಗೆ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪೆನಿಯು ತನ್ನ ಆಡಳಿತಾತ್ಮಕ ಅನುಮೋದನೆಯನ್ನು ದಿನಾಂಕ : 27.3.2003 ರಂದು ನೀಡಿರುತ್ತದೆ. ಹಣಕಾಸಿನ ಲಭ್ಯತೆಯನ್ನು ಆಧರಿಸಿ ಈ ವಿದ್ಯುತ್ ವಿತರಣ ಕೇಂದ್ರದ ನಿರ್ಮಾಣ ಕಾರ್ಯಗಳನ್ನು ನಿರ್ವಹಿಸುವ ಬಗ್ಗೆ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು. ಹೆಬ್ಬಾಳ ಮತ್ತು ನಿಡಸೋಸಿ ಗ್ರಾಮಗಳಲ್ಲಿ ತಲಾ ಒಂದು 33 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ತಾಂತ್ರಿಕ ಸಮಿತಿಯು ತನ್ನ ಅನುಮೋದನೆಯನ್ನು ಈಗಾಗಲೇ ನೀಡಿರುತ್ತದೆ.

ಈ ಕಾಮಗಾರಿಗಳಿಗೆ ಆಡಳಿತಾತ್ಮಕ ಮಂಜೂರಾತಿ ದೊರೆತ ನಂತರ ಕಾಮಗಾರಿಯ ನಿರ್ವಹಣೆಯ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ನಿವೇಶನ ಹಾಗೂ ಕಟ್ಟಡಗಳಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಖಾತೆ ಪಡೆಯಲು ಅಭಿವೃದ್ಧಿ ಶುಲ್ಕ ಪದ್ಧತಿ

2540(3133) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಂದಾಯ ನಿವೇಶನ ಹಾಗೂ ಕಟ್ಟಡಗಳಿಗೆ ನಗರದ ಸ್ಥಳೀಯ ಸಂಸ್ಥೆಗಳಲ್ಲಿ ಖಾತೆ ಪಡೆಯಲು ಅಭಿವೃದ್ಧಿ ಶುಲ್ಕ ಪದ್ಧತಿಯನ್ನು ಜಾರಿಗೆ ತಂದದ್ದು ಯಾವಾಗ;

ಆ) ಈ ಪದ್ಧತಿಯನ್ನು ರದ್ದುಗೊಳಿಸಲಾಗಿದೆಯೇ; ಹಾಗಿದ್ದಲ್ಲಿ ಕಾರಣಗಳೇನು;

ಇ) ಈ ಪದ್ಧತಿಯನ್ನು ರದ್ದುಪಡಿಸಿರುವುದರಿಂದ ಬೆಂಗಳೂರು ವ್ಯಾಪ್ತಿಯ ನಗರಪ್ರದೇಶಗಳ ಆದಾಯಕ್ಕೆ ತೊಂದರೆಯಾಗಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಪುನಃ ಈ ಪದ್ಧತಿಯನ್ನು ಜಾರಿಗೆ ತರಲು ಸರ್ಕಾರದ ನಿಲುವೇನು?

ಶ್ರೀ ಡಿ.ಕೆ. ಶಿವಕುಮಾರ (ನಗರಾಭಿವೃದ್ಧಿ ಸಚಿವರು) :

ಅ) ನವಂಬರ್ 1996

ಆ) ಹೌದು.

ಸುತ್ತೋಲೆ ಸಂ: ನಇ: 10:ಟಿಸಿಬಿ: 2003, ದಿನಾಂಕ : 25.3.2003 ರನ್ವಯ ಅಭಿವೃದ್ಧಿ ಶುಲ್ಕವನ್ನು ಕರ್ನಾಟಕ ಪುರಸಭೆ 1964ರ ಕಲಂ 160ರ ವ್ಯಾಪ್ತಿಗೆ ಒಳಪಡುವ ಭೂಮಿ ಹೊರತುಪಡಿಸಿ, ಉಳಿದ ಯಾವುದೇ ಖಾಸಗಿ ಭೂಮಿಗೆ ಅಭಿವೃದ್ಧಿ ಶುಲ್ಕವನ್ನು ವಸೂಲಿ ಮಾಡಲು ಕರ್ನಾಟಕ ಪುರಸಭಾ ಕಾಯ್ದೆಯಲ್ಲಿ ಅವಕಾಶವಿಲ್ಲದ್ದರಿಂದ, ಮತ್ತು ಕರ್ನಾಟಕ ಗ್ರಾಮಾಂತರ ನಗರ ಯೋಜನೆ ಕಾಯ್ದೆ 1961 ಕಲಂ 18 ರಂತೆ ಈ ಶುಲ್ಕವನ್ನು ವಸೂಲು ಮಾಡುವ ಅಧಿಕಾರ ಯೋಜನಾ ಪ್ರಾಧಿಕಾರಗಳಿಗಿರುವುದರಿಂದ, ಸದರಿ ಸುತ್ತೋಲೆಯನ್ನು ರದ್ದುಪಡಿಸಲಾಗಿದೆ.

ಇ) ಕಾಯ್ದೆಯಂತೆ ಯಾವುದಾದರೊಂದು ಸಂಸ್ಥೆಯು ಅಭಿವೃದ್ಧಿ ಶುಲ್ಕವನ್ನು ಸಂಗ್ರಹಿಸಬೇಕಾಗಿರುವುದರಿಂದ, ಆದಾಯಕ್ಕೆ ತೊಂದರೆಯಾಗಿದೆ ಎನ್ನಲಾಗುವುದಿಲ್ಲ.

ಈ) ಕಾನೂನಿನಲ್ಲಿ ಅವಕಾಶವಿಲ್ಲವಾದುದರಿಂದ, ಜಾರಿಗೆ ತರಲು ಸಾಧ್ಯವಿಲ್ಲ.

ಸಕ್ಕರೆ ಕಾರ್ಖಾನೆಗಳಿಂದ ಇಂಧನವನ್ನು ಹೆಚ್ಚಿನ ದರದಲ್ಲಿ ಖರೀದಿಸುವುದು

2541(3134) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಕ್ಕರೆ ಕಾರ್ಖಾನೆಗಳಿಂದ ವಿದ್ಯುತ್ ಖರೀದಿಗೆ ಕ್ರೆಸಿಲ್ (CRISIL) ಸಂಸ್ಥೆ ಯಾವ ದರವನ್ನು ನಿಗದಿ ಮಾಡಿತ್ತು; ವಾಸ್ತವಿಕವಾಗಿ ಈಗ ಯಾವ ದರದಲ್ಲಿ ವಿದ್ಯುತ್ ಖರೀದಿಸಲಾಗುತ್ತಿದೆ;

ಆ) ಹೆಚ್ಚುವರಿ ದರ ನಿಗದಿ ಪಡಿಸಿದ್ದರೆ ಅದಕ್ಕೆ ಕಾರಣಗಳೇನು; ಕಳೆದ ಮೂರು ವರ್ಷದಿಂದ ಈವರೆಗೆ ಪಾವತಿಯಾದ ಹೆಚ್ಚುವರಿ ಹಣ ಎಷ್ಟು;

ಇ) ಹೆಚ್ಚುವರಿ ದರ ನಿಡಿ ನಷ್ಟ ಆಗಿದ್ದರ ಬಗ್ಗೆ ಮಹಾ ಲೆಕ್ಕಪರಿಶೋಧಕರು ಮತ್ತು ನಿಯಂತ್ರಕರು ವರದಿ ನೀಡಿದ್ದಾರೆಯೆ;